RNU AIR DHARWAD

**DECEMBER 17,2024**
**ALL INDIA RADIO- DHARWAD**
**PRADESH SAMACHARA (KANNADA) 12PM**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

**ಓದಿದವವರು: ವಿವೇಕಾದಿತ್ಯ ಕನಿಯಾಲ**

<><><>

**'ವೃಕ್ಷ ಮಾತೆ', ಪದ್ಮಶ್ರೀ ಪುರಸ್ಕೃತ,** ತುಳಸಿ ಗೌಡ, ಅವರ ಪಾರ್ಥಿವ ಶರೀರದ ಅಂತ್ಯಕ್ರಿಯೆ, ಇಂದು ಉತ್ತರಕನ್ನಡ ಜಿಲ್ಲೆ ಅಂಕೋಲಾದ, ಸ್ವಗ್ರಾಮ ಹೊನ್ನಳ್ಳಿಯಲ್ಲಿ ಸಕಲ ಸರ್ಕಾರಿ ಗೌರವಗಳೊಂದಿಗೆ ಜರುಗಲಿದ್ದು, ಜಿಲ್ಲಾಡಳಿತದಿಂದ ಸಕಲ ಸಿದ್ಧತೆ ಕೈಗೊಳ್ಳಲಾಗಿದೆ. ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ತಮ್ಮ ಎಕ್ಸ್ ಖಾತೆಯಲ್ಲಿ ಸಂತಾಪ ಸೂಚಿಸಿದ್ದು, ತುಳಸಿ ಗೌಡ ಅವರ ಅನನ್ಯ ಪರಿಸರ ಕಾಳಜಿ, ಅವರು ಭೂಗ್ರಹವನ್ನು ರಕ್ಷಿಸಲು ಮಾಡಿರುವ ಕೆಲಸಗಳು ತಲೆಮಾರುಗಳಿಗೆ ಪ್ರೇರಣೆ ನೀಡಲಿವೆ ಎಂದಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಂತಾಪ ಸೂಚಿಸಿದ್ದು, ಕಂಬನಿ ಮಿಡಿದಿದ್ದಾರೆ. ರಾಜ್ಯ ವಿಧಾನ ಪರಿಷತ್ತಿನಲ್ಲಿ, ಸಭಾಪತಿ ಬಸವರಾಜ ಹೊರಟ್ಟಿ ಅವರು ತುಳಸಿಗೌಡ ಅವರ ನಿಧನದ ವಿಷಯ ಪ್ರಸ್ತಾಪಿಸಿ, ಸಂತಾಪ ಸೂಚನೆಯ ನಿರ್ಣಯ ಮಂಡಿಸಿದರು.

<><><>

**ಕೊಡಗಿನಲ್ಲಿ ಕೊಡವರ** ಕೊಯ್ಲು ಹಬ್ಬ ಹುತ್ತರಿ ಅಂಗವಾಗಿ ಕೋಲಾಟದ ಸಂಭ್ರಮ ಜರುಗುತ್ತಿದೆ. ಗ್ರಾಮಗಳ ಪ್ರಮುಖ ಮೈದಾನಗಳಲ್ಲಿ ಹುತ್ತರಿ ಮುಗಿದು ಒಂದು ವಾರದ ವರೆಗೂ ಜನಪದ ಕೋಲಾಟದ ನಾದ ರಿಂಗಣಿಸುತ್ತದೆ. ಹುತ್ತರಿ ಕೊಲಾಟ್ ಮಹತ್ವದ ಬಗ್ಗೆ ಜಾನಪದ ಕಲಾವಿದ, ಮಾದೇಟಿರ ಬೆಳ್ಳಿಯಪ್ಪ ಅವರು ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ.

<><><>

**ಮಾದೇಟಿರ ಬೆಳ್ಳಿಯಪ್ಪ ಧ್ವನಿ ಸೆಕೆಂದುಗಳು**

<><><>

**ವಿಶೇಷಚೇತನ ಮಕ್ಕಳ ಶಿಕ್ಷಣಕ್ಕೆ** ಹೆಚ್ಚಿನ ಒತ್ತು ನೀಡಲು, ಶಿಕ್ಷಣ ಇಲಾಖೆ ಯೋಜಿಸಿದೆ ಎಂದು ಧಾರವಾಡ ನಗರ ಕ್ಷೇತ್ರ ಶಿಕ್ಷಣಾಧಿಕಾರಿ ಆರ್.ಆರ್ ಸದಲಗಿ ತಿಳಿಸಿದ್ದಾರೆ. ಧಾರವಾಡ ಗ್ರಾಮೀಣ ವಲಯ ಸಂಪನ್ಮೂಲ ಕೇಂದ್ರದಲ್ಲಿ ಜರುಗಿದ, ತಾಲೂಕು ಮಟ್ಟದ ಪ್ರಾಥಮಿಕ ಹಾಗೂ ಪ್ರೌಢ ಶಾಲಾ ಮುಖ್ಯ

ಶಿಕ್ಷಕರಿಗೆ, ವಿಶೇಷ ಚೇತನ ಮಕ್ಕಳ ಸಬಲೀಕರಣಕ್ಕೆ ಶಾಲೆ ಮತ್ತು ಸಮುದಾಯದ ಪಾತ್ರ, ಕುರಿತ ಕಾರ್ಯಾಗಾರ ಉದ್ಘಾಟಿಸಿ, ಅವರು ಮಾತನಾಡಿದರು. ವಿಶೇಷ ಚೇತನ ಮಕ್ಕಳು ಪ್ರತಿಭಾವಂತರಾಗಿದ್ದು, ಅವರಿಗೆ ಸೂಕ್ತ ಮಾರ್ಗದರ್ಶನ ಹಾಗೂ ತಿಳಿವಳಿಕೆ ಮೂಡಿಸಿದರೆ ಎಲ್ಲ ರಂಗಗಳಲ್ಲೂ ಯಶಸ್ಸು ಸಾಧಿಸಲಿದ್ದಾರೆ ಎಂದರು.

<><><>

**ಪ್ರಸ್ತುತ ರಾಜ್ಯ ಪಠ್ಯಕ್ರಮದ,** 6 ರಿಂದ 10ನೇ ತರಗತಿಗಳಿಗೆ, ಗಣಿತ ಮತ್ತು ವಿಜ್ಞಾನ ವಿಷಯಗಳಲ್ಲಿ, ಸಿ.ಬಿ.ಎಸ್.ಇ. ಪಠ್ಯಕ್ರಮವನ್ನು ಯಥಾವತ್ತಾಗಿ ಅಳವಡಿಸಿಕೊಳ್ಳಲಾಗಿದೆ ಎಂದು, ಶಾಲಾ ಶಿಕ್ಷಣ ಖಾತೆ ಸಚಿವ ಮಧು ಬಂಗಾರಪ್ಪ ತಿಳಿಸಿದ್ದಾರೆ. ವಿಧಾನ ಪರಿಷತ್ತಿನಲ್ಲಿ, ಶಾಸಕ ಎಂ.ಎಲ್. ಅನಿಲಕುಮಾರ ಅವರ, ಚುಕ್ಕೆ ಗುರುತಿನ ಪ್ರಶ್ನೆಗೆ, ಸಚಿವರು ಉತ್ತರಿಸಿದರು.

<><><>

**ಉನ್ನತ ಶಿಕ್ಷಣ ಇಲಾಖೆ** ಹಾಗೂ ಭಾರತದ ಬ್ರಿಟಿಷ್ ಹೈ ಕಮಿಷನ್ ಸಹಯೋಗದಲ್ಲಿ, ಮಹಿಳಾ ಪದವಿಧರೆಯರು, ಅಂತಾರಾಷ್ಟ್ರೀಯ ಸ್ನಾತಕೋತ್ತರ ವಿದ್ಯಾರ್ಥಿ ವೇತನ ಪಡೆದು, ಅಧ್ಯಯನ ನಡೆಸಲು ಅನುವಾಗುವ, ಚಿವ್ನಿಂಗ್ ಕರ್ನಾಟಕ ಸ್ನಾತಕೋತ್ತರ ವಿದ್ಯಾರ್ಥಿ ವೇತನ ಒಡಂಬಡಿಕೆಗೆ, ಉನ್ನತ ಶಿಕ್ಷಣ ಖಾತೆ ಸಚಿವ ಎಂ.ಸಿ.ಸುಧಾಕರ ಚಾಲನೆ ನೀಡಿದರು. ಬೆಳಗಾವಿ ಸುವರ್ಣಸೌಧದ ಮೂರನೇ ಮಹಡಿಯ ಸಭಾಂಗಣದಲ್ಲಿ, ಒಡಂಬಡಿಕೆಗೆ ಗಣ್ಯರು ಸಹಿ ಹಾಕಿದರು.

<><><>

**ಈ ಮಧ್ಯೆ, ಪೋಸ್ಟ್ ಡಾಕ್ಟರಲ್ ಫೆಲೋಶಿಪ್ ಮಾಡುತ್ತಿರುವ,** ಯಾವುದೇ ಫೆಲೋಶಿಪ್ ಪಡೆಯದ, ಪರಿಶಿಷ್ಟ ಪಂಗಡದ ಸಂಶೋಧನಾ ವಿದ್ಯಾರ್ಥಿಗಳಿಗೆ, ಶಿಷ್ಯವೇತನ ನೀಡಲು, ಸಮಾಜ ಕಲ್ಯಾಣ ಇಲಾಖೆ, ಅರ್ಹ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಿದೆ.

<><><>

**ತಾಲೂಕು ಮಟ್ಟದ ಅಧಿಕಾರಿಗಳ** ತಂಡ ಕಟ್ಟಿಕೊಂಡು ಗ್ರಾಮಗಳಿಗೆ ತೆರಳಿ ಜನರ ಅಹವಾಲುಗಳನ್ನು ಆಲಿಸಿ, ಸ್ಥಳದಲ್ಲೇ ಪರಿಹಾರ ಒದಗಿಸುತ್ತಿರುವ ಶಾಸಕ ಪ್ರದೀಪ್ ಈಶ್ವರ್ ಎಲ್ಲ ಶಾಸಕರಿಗೂ ಮಾದರಿಯಾಗಿದ್ದಾರೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಶ್ಲಾಘಿಸಿದ್ದಾರೆ.

<><><>

**ಶ್ರೀ ಸಿದ್ಧಾರೂಢರ 190ನೇ ಜಯಂತ್ಯುತ್ಸವ,** ಶ್ರೀ ಗುರುನಾಥಾರೂಢರ 115ನೇ ಜಯಂತ್ಯುತ್ಸವ ಹಾಗೂ ಶ್ರೀ ಸಿದ್ಧಾರೂಢರ ಕಥಾಮೃತದ ಶತಮಾನೋತ್ಸವದ ನಿಮಿತ್ತ, ಆರೂಢ ಜ್ಯೋತಿ ಯಾತ್ರೆ ನಡೆಯಲಿದೆ. ಇದೇ 23ನೇ ತಾರೀಖಿನಂದು ಶ್ರೀ ಸಿದ್ಧಾರೂಢರ ಜನ್ಮಸ್ಥಳವಾದ ಬೀದರ್ ಜಿಲ್ಲೆ ಚಕಳಾಪುರದಿಂದ ಹೊರಟು, ಕರ್ನಾಟಕ, ಆಂಧ್ರ, ಮಹಾರಾಷ್ಟ್ರ ಹಾಗೂ ಗೋವಾ ರಾಜ್ಯಗಳ ಮೂಲಕ, ಫೆಬ್ರುವರಿ 18 ರಂದು ಹುಬ್ಬಳ್ಳಿಯ ಶ್ರೀ ಸಿದ್ಧಾರೂಢ ಮಠ ತಲುಪಲಿದೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ 1 ಗಂಟೆ 10 ನಿಮಿಷಕ್ಕೆ..

<><><>